# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 629
2. ಸದಸ್ಯರ ಹೆಸರು : ಶ್ರೀ ಹೆಚ್.ಎಂ.ರಮೇಶ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 04.03.2021

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ತುಮಕೂರು ಜಿಲ್ಲೆಯ ಮಳೆ ನೆರಳಿನ ಹಾಗೂ ಗಣಿ ಬಾಧಿತ ತಾಲ್ಲೂಕುಗಳಾದ ಗುಬ್ಬಿ, ತಿಪಟೂರು, ಚಿಕ್ಕನಾಯಕಹಳ್ಳಿ, ಶಿರಾಗಳಿಗೆ ಸಂಪೂರ್ಣ ನೀರಾವರಿ ಕಲ್ಪಿಸುವ ಭದ್ರಾ ಮೇಲ್ದಂಡೆ ಯೋಜನ ಕಾಮಗಾರಿಯ ಸದ್ಯದ ಸ್ಥಿತಿಗತಿಗಳೇನು; (ಮಾಹಿತಿ ನೀಡುವುದು) | ವಿಶ್ವೇಶ್ವರಯ್ಯ ಜಲ ನಿಗಮದ ವ್ಯಾಪ್ತಿಯಲ್ಲಿ ಬರುವ ಭದ್ರಾ ಮೇಲ್ದಂಡೆ ಯೋಜನೆಯಡಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ಮತ್ತು ಶಿರಾ ತಾಲ್ಲೂಕುಗಳು ಒಳಪಡುತ್ತಿದ್ದು, ಸದರಿ ತಾಲ್ಲೂಕಿನಡಿ ಬರುವ ಯೋಜನೆಯ ಕಾಮಗಾರಿಗಳ ವಿವರ ಈ ಕೆಳಗಿನಂತಿದೆ:-<br>• ತುಮಕೂರು ಶಾಖಾ ಕಾಲುವೆ ಪ್ಯಾಕೇಜ್ ನಂ.8 (ಕಿ.ಮೀ. 108.00 ರಿಂದ 135.00) ರ ನಾಲಾ ಅಗೆತ ಕಾಮಗಾರಿ, ಕಾಲುವೆ ಲೈನಿಂಗ್ ಹಾಗೂ ಅಡ್ಡ ಮೋರಿಗಳ ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br>• ತುಮಕೂರು ಶಾಖಾ ಕಾಲುವೆ ಪ್ಯಾಕೇಜ್ ನಂ.9 (ಕಿ.ಮೀ. 135.00 ರಿಂದ 159.684) ರ ನಾಲಾ ಅಗೆತ ಕಾಮಗಾರಿ, ಆಕ್ವಡಕ್ಟ್, ಕಾಲುವೆ ಲೈನಿಂಗ್ ಹಾಗೂ ಅಡ್ಡ ಮೋರಿಗಳ ಕಾಮಗಾರಿ ಪ್ರಗತಿಯಲ್ಲಿರುತ್ತವೆ.<br>• ಶಿರಾ ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಯನ್ನು ನಿರ್ವಹಿಸಲು ಇತ್ತೀಚಿಗೆ ಗುತ್ತಿಗೆ ವಹಿಸಲಾಗಿದ್ದು, ಕಾಮಗಾರಿಯ ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ.<br>ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. |
| ಆ) | ಭದ್ರಾ ಮೇಲ್ದಂಡೆ ಯೋಜನೆಗೆ ಈವರೆಗೆ ಆದ ಖರ್ಚು ವೆಚ್ಚಗಳೆಷ್ಟು; (ಮಾಹಿತಿ ನೀಡುವುದು) | ಭದ್ರಾ ಮೇಲ್ದಂಡೆ ಯೋಜನೆಗೆ ಇಲ್ಲಿಯವರೆಗೆ (ಜನವರಿ 2021 ರವರೆಗೆ) ರೂ.4246.45 ಕೋಟಿಗಳ ಸಂಚಿತ ವೆಚ್ಚ ಮಾಡಲಾಗಿರುತ್ತದೆ. |
| ಇ) | ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ನೀರು ಒದಗಿಸುವ ಎತ್ತಿನಹೊಳೆ ಯೋಜನೆ ಯಾವ ಹಂತದಲ್ಲಿದೆ; (ಮಾಹಿತಿ ನೀಡುವುದು) | ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಪ್ರಗತಿಯ ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ. |
| ಈ) | ಕಳೆದೆರಡು ವರ್ಷಗಳಿಂದ ಬಯಲು ಸೀಮೆಗೆ ನೀರಾವರಿ ಕಲ್ಪಿಸಲು ಸರ್ಕಾರ ವ್ಯಯಿಸಿದ ಹಣವೆಷ್ಟು; (ಮಾಹಿತಿ ನೀಡುವುದು) | ವಿಶ್ವೇಶ್ವರಯ್ಯ ಜಲ ನಿಗಮದಡಿ ಕೈಗೊಳ್ಳಲಾಗುತ್ತಿರುವ ಭದ್ರಾ ಮೇಲ್ದಂಡೆ ಯೋಜನೆಯಿಂದ ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಮತ್ತು ದಾವಣಗೆರೆ ಜಿಲ್ಲೆಗಳಡಿ ಬರುವ ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಿದ್ದು, ಈ ಯೋಜನೆಯಡಿ ಕಳೆದ ಎರಡು ವರ್ಷಗಳಲ್ಲಿ ವ್ಯಯಿಸಿದ ಮೊತ್ತದ ವಿವರ ಕೆಳಕಂಡಂತಿದೆ;<br>1 \| 2018-19 \| 657.39 ಕೋಟಿಗಳು<br>2 \| 2019-20 \| 842.74 ಕೋಟಿಗಳು |
| ಉ) | ಸಿಂಗಟಾಲೂರು ಹುಲಿಗುಡ್ಡ ಏತ ನೀರಾವರಿ ಯೋಜನೆಯ ಕಾಮಗಾರಿ ಸಮರ್ಪಕವಾಗಿ ನಡೆಯುತ್ತಿದೆಯೇ? (ಮಾಹಿತಿ ನೀಡುವುದು) | ಸಿಂಗಟಾಲೂರು ಏತ ನೀರಾವರಿ ಯೋಜನೆಯ ಕಾಮಗಾರಿಗಳು ಸಮರ್ಪಕವಾಗಿ ನಡೆಯುತ್ತಿದ್ದು, ಸದರಿ ಯೋಜನೆಯ ವಿವರವಾದ ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. |

**ಸಂಖ್ಯೆ: ಜಸಂಇ 20 ಡಬ್ಲ್ಯೂಎಲ್‌ಎ 2021**

(ಬಿ.ಎಸ್ ಯಡಿಯೂರಪ್ಪ)
ಮುಖ್ಯಮಂತ್ರಿ

**ವಿಧಾನ ಪರಿಷತ್ತು ಸದಸ್ಯರಾದ ಮಾನ್ಯ ಶ್ರೀ ಹೆಚ್.ಎಂ.ರಮೇಶಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 629ಕ್ಕೆ ಅನುಬಂಧ-1**

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು 2 ಹಂತಗಳಲ್ಲಿ ಕೈಗೊಳ್ಳಲಾಗುತ್ತಿದೆ.

**ಭೌತಿಕ ಪ್ರಗತಿ:**

**ಮೊದಲನೇ ಹಂತ:** ಮೊದಲನೆ ಹಂತದ ಏತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಭೌತಿಕ ಪ್ರಗತಿಯ ಪ್ರಸ್ತುತ ಹಂತದ ವಿವರ ಈ ಕೆಳಗಿನಂತಿದೆ.

- ✓ ಒಟ್ಟಾರೆ 8 ವಿಯರ್‌ಗಳ ಪೈಕಿ ವಿಯರ್ ಸಂ. 1,4,5,6,8 ಕಾಮಗಾರಿಗಳು ಪೂರ್ಣಗೊಂಡಿದ್ದು, ವಿಯರ್ ಸಂ. 2, 7 ರ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿವೆ. ವಿಯರ್-3ಕ್ಕೆ ಸಂಬಂಧಿಸಿದಂತೆ GPS co-ordinates ನಲ್ಲಿ ಕಂಡು ಬಂದಂತಹ ವ್ಯತ್ಯಾಸದಿಂದ ಅರಣ್ಯ ಇಲಾಖೆಯ ಆದೇಶದಂತೆ ಕಾಮಗಾರಿಗಳು ಸ್ಥಗಿತಗೊಂಡಿದ್ದವು. ಆದರೆ, ಸದರಿ GPS co-ordinates ಗಳ ಮರು ಪರಿಶೀಲನೆಯ ನಂತರ ಈ ಹಿಂದೆ 2015ರಲ್ಲಿ ಅನುಮತಿಸಲ್ಪಟ್ಟ ಪ್ರದೇಶದಲ್ಲಿ ಪಂಪ್‌ಹೌಸ್ ಸಂ.3 ಮತ್ತು ವಿಯರ್-3ರ ಕಾಮಗಾರಿಗಳನ್ನು ಇತ್ತೀಚೆಗೆ ಪುನರ್-ಪ್ರಾರಂಭಿಸಲಾಗಿರುತ್ತದೆ. ಬಾಕಿ ಉಳಿದ Changein GPS co-ordinates ಗೆ ಸಂಬಂಧಿಸಿದ ಗೊಂದಲ ನಿವಾರಣೆ ಕುರಿತು ಅರಣ್ಯ ಇಲಾಖೆಯೊಂದಿಗೆ ವ್ಯವಹರಿಸಲಾಗುತ್ತಿದೆ.
- ✓ 9 ಪಂಪ್‌ಹೌಸ್‌ಗಳ ಪೈಕಿ ಪಂಪ್‌ಹೌಸ್ ಸಂ. 3 ಹೊರತುಪಡಿಸಿ ಇನ್ನುಳಿದ ಎಲ್ಲಾ 8 ಪಂಪ್‌ಹೌಸ್ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.
- ✓ 4 ವಿತರಣಾ ತೊಟ್ಟಿಗಳ ಪೈಕಿ ವಿತರಣಾ ತೊಟ್ಟಿ ಸಂ.3 ನ್ನು ಹೊರತುಪಡಿಸಿ ಇನ್ನುಳಿದ ವಿತರಣಾ ತೊಟ್ಟಿಗಳ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ವಿತರಣಾ ತೊಟ್ಟಿ 3 ರ ಕಾಮಗಾರಿಯು ಪ್ರಗತಿಯಲ್ಲಿದೆ.
- ✓ ಒಟ್ಟು 126.31 ಕಿ.ಮೀ ಉದ್ದದ ಏರುಕೊಳವೆಯ ಪೈಕಿ, ಇದುವರೆಗೆ 112 ಕಿ.ಮೀ ಏರುಕೊಳವೆ ಕಾಮಗಾರಿಯು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ.
- ✓ 400/220 ಕೆ.ವಿ ವಿದ್ಯುತ್ ಸ್ಥಾವರ ಮತ್ತು ಸಬ್‌ಸ್ಟೇಷನ್ ಕಾಮಗಾರಿಗಳು ಕ್ರಮವಾಗಿ ಶೇ.95% ಮತ್ತು ಶೇ.85% ರಷ್ಟು ಪೂರ್ಣಗೊಂಡಿವೆ.
- ✓ ವಿದ್ಯುತ್ ವಿತರಣಾ ಕಾಮಗಾರಿ: ಎಲ್ಲಾ 08 ಸಬ್ ಸ್ಟೇಷನ್‌ಗಳಿಗೆ ವಿದ್ಯುತ್ ಅನ್ನು 324 ಟವರ್ ಗಳ ನಿರ್ಮಾಣ ಮಾಡಿ ವಿದ್ಯುತ್ ವಾಹಕಗಳನ್ನು ಅಳವಡಿಸಿ, ವಿದ್ಯುತ್ ಅನ್ನು ಸರಬರಾಜು ಮಾಡಲಾಗುವುದು. ಒಟ್ಟು 324 ಟವರ್‌ಗಳ ಪೈಕಿ ಇಲ್ಲಿಯವರೆಗೆ 179 ಟವರ್‌ಗಳನ್ನು ಅಳವಡಿಸಲಾಗಿದೆ ಹಾಗೂ 52.25 ಕಿ.ಮೀ ಉದ್ದದ ವಿದ್ಯುತ್ ವಾಹಕ ಸಂಬಂಧಸಿದಂತೆ 16.4 ಕಿ.ಮೀ ವಿದ್ಯುತ್ ವಾಹಕವನ್ನು ಅಳವಡಿಸಲಾಗಿದೆ. ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ.
- ✓ ಒಟ್ಟಾರೆ ಮೊದಲನೇ ಹಂತದ ಏತ ಕಾಮಗಾರಿಗಳು ಮತ್ತು ವಿದ್ಯುತ್ ಕಾಮಗಾರಿಗಳನ್ನು ಪೂರ್ಣಗೊಳಿಸಿ 2021ರ ಮುಂಗಾರಿನಲ್ಲಿ ಪ್ರಾಯೋಗಿಕವಾಗಿ ನೀರನ್ನು ಹರಿಸಿ, ಯೋಜನೆಯನ್ನು ಭಾಗಶಃ ಚಾಲನೆಗೊಳಿಸಲು ಯೋಜಿಸಲಾಗಿದೆ.

**ಎರಡನೇ ಹಂತ:** ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಎರಡನೇ ಹಂತದಲ್ಲಿ ಸಕಲೇಶಪುರ ತಾಲ್ಲೂಕಿನ ಹರವನಹಳ್ಳಿ ಹತ್ತಿರ ವಿತರಣಾ ತೊಟ್ಟಿಯಿಂದ 260.00 ಕಿ.ಮೀ ಉದ್ದದ ಗುರುತ್ವ ಕಾಲುವೆಯನ್ನು (ಮಾರ್ಗದ ಮಧ್ಯದಲ್ಲಿ ಸುಮಾರು 10.47 ಕಿ.ಮೀ ಉದ್ದದ ಮೇಲ್ಗಾಲುವೆ ಒಳಗೊಂಡಂತೆ) ನಿರ್ಮಿಸುವುದು ಹಾಗೂ ಸಂಬಂಧಪಟ್ಟ ಫೀಡರ್ ಕಾಲುವೆಗಳನ್ನು ನಿಮಿಸುವುದು, ಭೈರಗೊಂಡ್ಲು ಜಲಾಶಯ ನಿರ್ಮಾಣ, ಭೈರಗೊಂಡ್ಲು ಜಲಾಶಯದಿಂದ ಕುಂದಾಣ ವರಗೆ ನೀರನ್ನು ಎತ್ತುವ ಕಾಮಗಾರಿ, ಕೋಲಾರ ಮತ್ತು ಶ್ರೀನಿವಾಸಪುರ ಫೀಡರ್ ನಿರ್ಮಾಣ ಕಾಮಗಾರಿಗಳನ್ನು ಒಳಗೊಂಡಿರುತ್ತದೆ.

- ✓ ಎರಡನೇ ಹಂತದ ಗುರುತ್ವ ಕಾಲುವೆಯ ಪೂರ್ಣ ಉದ್ದಕ್ಕೆ ಕಾಮಗಾರಿಗಳನ್ನು ಗುತ್ತಿಗೆ ವಹಿಸಲಾಗಿದ್ದು, ಕಿ.ಮೀ 0.00 ರಿಂದ ಕಿ.ಮೀ 240.00 ವರೆಗಿನ ಕಾಮಗಾರಿಗಳು ಪ್ರಗತಿಯಲ್ಲಿದ್ದು, (ಕಿ.ಮೀ 199.620 ರಿಂದ 210.090 ಕಿ.ಮೀ ವರೆಗಿನ ಬೃಹತ್ ಮೇಲ್ಗಾಲುವೆ ಒಳಗೊಂಡಂತೆ), ಸುಮಾರು 78 ಕಿ.ಮೀ ಉದ್ದದ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

✓ ಭೈರಗೊಂಡ್ಲು ಜಲಾಶಯ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ, ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸಲು ಪೂರ್ವಸಿದ್ಧತಾ ಕೆಲಸ ಕಾರ್ಯಗಳನ್ನು ಕೈಗೊಂಡಾಗ ಕೊರಟಗೆರೆ ತಾಲ್ಲೂಕಿನ ರೈತರು ದೊಡ್ಡಬಳ್ಳಾಪುರ ತಾಲ್ಲೂಕಿನ ಭೂಸ್ವಾಧೀನ ದರಗಳಂತೆಯೇ, ಏಕರೂಪ ಪರಿಹಾರದರ ನೀಡಲು ಒತ್ತಾಯಿಸಿದ್ದರಿಂದ ಕಾಮಗಾರಿಯು ಪ್ರಸಕ್ತ ಸ್ಥಗಿತಗೊಂಡಿರುತ್ತದೆ.

**ಫೀಡರ್ ಕಾಲುವೆ ಕಾಮಗಾರಿಗಳು**

**ಭೈರಗೊಂಡ್ಲು ಜಲಾಶಯಕ್ಕಿಂತ ಮೊದಲು ಕವಲೊಡೆಯುವ ಫೀಡರ್ ಕಾಲುವೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.**

✓ **ಟಿ.ಜಿ.ಹಳ್ಳಿ ಮತ್ತು ರಾಮನಗರ ಫೀಡರ್:** ಎತ್ತಿನಹೊಳೆ ಗುರುತ್ವ ಕಾಲುವೆಯ ಸರಪಳಿ 244.90 ಕಿ.ಮೀ ನಿಂದ ಹೊರಡುವ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ರಾಮನಗರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಹಾಗೂ ನೆಲಮಂಗಲ ತಾಲ್ಲೂಕಿನ 2 ಕೆರೆಗಳನ್ನು ತುಂಬಿಸುವ ರಾಮನಗರ ಫೀಡರ್ ಕಾಲುವೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿರುತ್ತದೆ.

✓ **ಮಧುಗಿರಿ ಫೀಡರ್:** ತುಮಕೂರು, ಕೊರಟಗೆರೆ, ಮಧುಗಿರಿ ಮತ್ತು ಪಾವಗಡ ತಾಲ್ಲೂಕುಗಳಿಗೆ ಕುಡಿಯುವ ನೀರಿಗಾಗಿ 1.163 ಟಿ.ಎಂ.ಸಿ ಮತ್ತು ಈ ಭಾಗದ 79 ಸಣ್ಣ ನೀರಾವರಿ ಕೆರೆಗಳಿಗೆ 1.476 ಟಿ.ಎಂ.ಸಿ. ನೀರನ್ನುಒದಗಿಸುವ ಮಧುಗಿರಿ ಫೀಡರ್ ಕಾಲುವೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿರುತ್ತದೆ.

✓ **ಗೌರಿಬಿದನೂರು ಫೀಡರ್:** ಗೌರಿಬಿದನೂರು ತಾಲ್ಲೂಕಿಗೆ ಕುಡಿಯುವ ನೀರಿಗಾಗಿ 0.506 ಟಿ.ಎಂ.ಸಿ ಮತ್ತು ಗೌರಿಬಿದನೂರು, ಕೊರಟಗೆರೆ, ಮಧುಗಿರಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕುಗಳ 107 ಸಣ್ಣ ನೀರಾವರಿ ಕೆರೆಗಳಿಗೆ 1.320 ಟಿ.ಎಂ.ಸಿ. ನೀರನ್ನು ಒದಗಿಸುವ ಗೌರಿಬಿದನೂರು ಫೀಡರ್ ಕಾಲುವೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿರುತ್ತದೆ.

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗೆ ಜನವರಿ 2021 ರ ಅಂತ್ಯಕ್ಕೆ ರೂ.7750.25 ಕೋಟಿಗಳ ಸಂಚಿತ ವೆಚ್ಚವಾಗಿರುತ್ತದೆ.

*****

**<u>ವಿಧಾನ ಪರಿಷತ್ತು ಸದಸ್ಯರಾದ ಮಾನ್ಯ ಶ್ರೀ ಹೆಚ್.ಎಂ.ರಮೇಶಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 629ಕ್ಕೆ ಅನುಬಂಧ-2</u>**

**ಸಿಂಗಟಾಲೂರು ಏತ ನೀರಾವರಿ ಯೋಜನೆಯ ಕಾಮಗಾರಿಗಳ ಪ್ರಸ್ತುತ ಹಂತ:-**

**ಬ್ಯಾರೇಜ್ ಕಾಮಗಾರಿಗಳು:**

ಹೂವಿನ ಹಡಗಲಿ ತಾಲೂಕಿನ ರಾಜವಾಳ ಮತ್ತು ಮುಂಡರಗಿ ತಾಲೂಕಿನ ಹಮ್ಮಿಗಿ ಗ್ರಾಮಗಳ ನಡುವೆ ತುಂಗಭದ್ರ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಮಾಡಲಾಗಿದೆ. ಸದರಿ ಬ್ಯಾರೇಜಿನ ಉದ್ದ 387.50 ಮೀ ಇದ್ದು, 12.50ಮೀ x 8.30ಮೀ ಅಳತೆಯ ಒಟ್ಟು 26 ಗೇಟುಗಳನ್ನು (Vertical Lift Gate) ಅಳವಡಿಸಲಾಗಿದೆ. ಬ್ಯಾರೇಜಿನ ಪೂರ್ಣ ಜಲಾಶಯ ಮಟ್ಟ 509.00 ಮೀ ಇದ್ದು, ಬ್ಯಾರೇಜಿನ ಗರಿಷ್ಠ ಸಂಗ್ರಹಣಾ ಸಾಮಾರ್ಥ್ಯ 3.12 ಟಿ.ಎಂ.ಸಿ ಆಗಿರುತ್ತದೆ.

**ಬಲಭಾಗದ ಕಾಮಗಾರಿಗಳು:**

ಈ ಭಾಗವು ಹೂವಿನಹಡಗಲಿ ತಾಲ್ಲೂಕು ವ್ಯಾಪ್ತಿಯಲ್ಲಿದ್ದು ಬಲಭಾಗದ ಮೊದಲನೇ ಮತ್ತು ಎರಡನೇ ಹಂತದ ನೀರೆತ್ತುವ ಘಟಕ ಹಾಗೂ ಇದರಡಿಯಲ್ಲಿ ಬರುವ ಎಲ್ಲಾ ಕಾಲುವೆಗಳ ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿದ್ದು, 35,791 ಎಕರೆ (14490 ಹೆಕ್ಟೇರ್) ಭೂ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿದೆ.

**ಎಡಭಾಗದ ಕಾಮಗಾರಿಗಳು:**

- ಮುಂಡವಾಡ-ಹಮ್ಮಿಗಿ ನೀರೆತ್ತುವ ಘಟಕ, ಮೊದಲನೇ ಹಂತ, ಎರಡನೇ ಹಂತ ಹಾಗೂ ಮೂರನೇ ಹಂತದ ನೀರೆತ್ತುವ ಘಟಕಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, ಎಲ್ಲಾ ನೀರೆತ್ತುವ ಘಟಕಗಳ ಕಾರ್ಯ ಪ್ರಾರಂಭಿಸಲಾಗಿದೆ.

- ಮುಂಡವಾಡ-ಹಮ್ಮಿಗಿ ಶಾಖಾ ಕಾಲುವೆ (ಒಟ್ಟು ಉದ್ದ 24.18 ಕೀ.ಮಿ) ಹಾಗೂ ಗದಗ ಶಾಖಾ ಕಾಲುವೆ (ಒಟ್ಟು ಉದ್ದ 69.44 ಕೀ.ಮಿ) ಕಾಮಗಾರಿಗಳು ಪೂರ್ಣಗೊಂಡಿದ್ದು, ಗದಗ ಪಟ್ಟಣದವರೆಗೆ ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ.

- ಮುಂಡರಗಿ-ಕೊಪ್ಪಳ ಶಾಖಾ ಕಾಲುವೆಯು 72.16 ಕಿ.ಮೀ ಉದ್ದವಿದ್ದು, ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ವ್ಯಾಪ್ತಿಯಲ್ಲಿ 0.00 ದಿಂದ 33.00 ಕಿ.ಮೀ ವರೆಗೆ ಕಾಲುವೆ ಹಾಗೂ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ವ್ಯಾಪ್ತಿಯಲ್ಲಿ 33.00 ಕಿ.ಮೀ ದಿಂದ 72.16 ಕಿ.ಮೀ ವರೆಗೆ ಕಾಲುವೆ ಕಾಮಗಾರಿಯು ಪೂರ್ಣಗೊಂಡಿದ್ದು, 72.16 ನೇ ಕಿ.ಮಿ ವರೆಗೆ ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ.

- **<u>ಆಲೂರು ಬನ್ನಿಕೊಪ್ಪ ನೀರೇತ್ತುವ ಘಟಕ</u>**

  ಮುಂಡರಗಿ ಶಾಖಾ ಕಾಲುವೆಯ ಚೈ 32+160 ಕಿ.ಮೀ ನಿಂದ offtake ಆಗುವ ರೂ.105.09 ಕೋಟಿಗಳ ಅಂದಾಜು ಮೊತ್ತದ ಆಲೂರು-ಬನ್ನಿಕೊಪ್ಪ ನೀರೆತ್ತುವ ಘಟಕದ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಸದರಿ ನೀರೆತ್ತುವ ಘಟಕದಿಂದ 19427 ಹೆಕ್ಟೇರ್ ಭೂ ಪ್ರದೇಶಕ್ಕೆ ಹನಿ ನೀರಾವರಿ ಒದಗಿಸುವ ಕಾಮಗಾರಿಯು ಪ್ರಾರಂಭಿಕ ಹಂತದಲ್ಲಿರುತ್ತದೆ. ಸದರಿ ಕಾಮಗಾರಿಯಿಂದ ಗದಗ ಜಿಲ್ಲೆಯ ರೋಣ ವಿಧಾನ ಸಭಾ ಕ್ಷೇತ್ರದ 7605.14 ಹೆಕ್ಟೇರ್ ಪ್ರದೇಶ ಹಾಗೂ ಕೊಪ್ಪಳ ಜಿಲ್ಲೆಯ ಕೊಪ್ಪಳ ಹಾಗೂ ಯಲಬುರ್ಗಾ ತಾಲ್ಲೂಕಿನ 8 ಗ್ರಾಮಗಳ 11821.86 ಹೆಕ್ಟೇರ್ ಭೂ ಪ್ರದೇಶವು ಹನಿ ನೀರಾವರಿಗೆ ಒಳಪಡುತ್ತದೆ.

## ಮೈಕ್ರೋ ಇರಿಗೇಷನ್ ಕಾಮಗಾರಿಯ ಪ್ರಸ್ತುತ ಹಂತ:

ಒಟ್ಟು 2,16,848 ಏಕರೆ (87,800 ಹೆಕ್ಟೇರ್) ಭೂ ಪ್ರದೇಶಕ್ಕೆ ಸಿಂಗಟಾಲೂರು ಏತ ನೀರಾವರಿ ಯೋಜನೆಯಿಂದ ಹನಿ ನೀರಾವರಿ ಕಲ್ಪಿಸಲು ಯೋಜಿಸಲಾಗಿದ್ದು, ಇದರಲ್ಲಿ ಕೈಗೊಂಡಿರುವ ಕಾಮಗಾರಿಗಳ ಪ್ರಸ್ತುತ ಹಂತದ ವಿವರಗಳು ಕೆಳಗಿನಂತಿವೆ.

- ಪ್ರಸ್ತುತ LBMC-II Reach ನ 10,080 ಹೆಕ್ಟೇರ್ ಪ್ರದೇಶಕ್ಕೆ ಹನಿ ನೀರಾವರಿಗೊಳಪಡಿಸುವ ಕಾಮಗಾರಿಯನ್ನು ಮಾರ್ಚ್ 2021 ರ ಅಂತ್ಯಕ್ಕೆ ಪೂರ್ಣಗೊಳಿಸಿ, ಈ ಸಾಲಿನ ಮುಂಗಾರು ಹಂಗಾಮಿಗೆ 10080 ಹೆಕ್ಟರ್ ಪ್ರದೇಶಕ್ಕೆ ಹನಿ ನೀರಾವರಿ ಕಲ್ಪಿಸಲು ಯೋಜಿಸಲಾಗಿದೆ.
- ಮುಂಡರಗಿ ಶಾಖಾ ಕಾಲುವೆಯ ಕಿ.ಮೀ 0.00 ದಿಂದ 24.39 ಕಿ.ಮೀ ವರೆಗೆ 12,767 ಹೆಕ್ಟೇರ್ ಪ್ರದೇಶಕ್ಕೆ ಹನಿ ನೀರಾವರಿಗೊಳಪಡಿಸುವ ಕಾಮಗಾರಿಯು ಪ್ರಾರಂಭಿಕ ಹಂತದಲ್ಲಿದೆ.
- LBMC III Reach ನ ಚೈ 0.00 ದಿಂದ 20.235 ಕಿ.ಮೀ ವರೆಗೆ 11,330 ಹೆಕ್ಟೇರ್ ಪ್ರದೇಶಕ್ಕೆ ಹನಿ ನೀರಾವರಿಗೊಳಪಡಿಸುವ ಕಾಮಗಾರಿಯು ಪ್ರಗತಿಯಲ್ಲಿದ್ದು, ಜೂನ–2021 ರ ಅಂತ್ಯಕ್ಕೆ 4000 ಹೆಕ್ಟರ್ ಪ್ರದೇಶಕ್ಕೆ ಹನಿ ನೀರಾವರಿ ಕಲ್ಪಿಸಲು ಯೋಜಿಸಲಾಗಿದೆ.
- LBMC III Reach ರಡಿ 17,470 ಹೆಕ್ಟೇರ್ ಪ್ರದೇಶಕ್ಕೆ ಹನಿ ನೀರಾವರಿಗೊಳಪಡಿಸುವ ಕಾಮಗಾರಿಯು ಸಹ ಪ್ರಗತಿಯಲ್ಲಿದೆ.
- ಮುಂಡರಗಿ ಶಾಖಾ ಕಾಲುವೆಯ ಚೈ 32+160 ಕಿ.ಮೀ ನಿಂದ off take ಆಗುವ ಆಲೂರು–ಬನ್ನಿಕೊಪ್ಪ ನೀರೆತ್ತುವ ಘಟಕದಿಂದ 19427 ಹೆಕ್ಟೇರ್ ಭೂ ಪ್ರದೇಶಕ್ಕೆ ಹನಿ ನೀರಾವರಿ ಒದಗಿಸುವ ಕಾಮಗಾರಿಯು ಸಹ ಪ್ರಗತಿಯಲ್ಲಿದೆ.
- ಮುಂಡರಗಿ ಶಾಖಾ ಕಾಲುವೆಯಡಿ ಬಾಕಿ ಉಳಿದ 16479 ಹೆಕ್ಟೇರ್ ಪ್ರದೇಶಕ್ಕೆ ಹನಿ ನೀರಾವರಿಗೊಳಪಡಿಸುವ ಕಾಮಗಾರಿಯ ಅಂದಾಜು ಪಟ್ಟಿಗಳು ತಯಾರಿಕಾ ಹಂತದಲ್ಲಿವೆ.
- ಸದರಿ ಕಾಮಗಾರಿಗಳನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಿ, ರೈತರ ಜಮೀನುಗಳಿಗೆ ನೀರಾವರಿಯನ್ನು ಸಮರ್ಪಕವಾಗಿ ಒದಗಿಸಲು ಯೋಜಿಸಲಾಗಿದೆ.

******